6 ಶ್ರೀ ಹರಚಿಶ್ಚಂದ್ರ ದೇ: ಕಾಲೂರು ಆಸ್ತಿ ಇಲ್ಲ

ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಇ) ಇಲ್ಲ, ಕೊಡಗು ದೇವಸ್ಥಾನದ ನಿಧಿ ವ್ಯವಸ್ಥಾಪನಾ ಸಮಿತಿಯು ವೇತನವನ್ನು ನಿಗಧಿಪಡಿಸಿದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ಜೇನು ವ್ಯವಸಾಯ

1136 (1594)

ಶ್ರೀ ಡಿ.ಎಸ್.ಮಾದಪ್ಪ: ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇಶದಲ್ಲೀ ಅತ್ಯಂತ ಖ್ಯಾತಿ ಪಡೆದಿರುವ ಕೊಡಗು ಜಿಲ್ಲೆಯ 'ಜೇನು ವ್ಯವಸಾಯ' ವಿನಾಶದ ಅಂಚಿಗೆ ತಲುಪಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಜೇನು ವ್ಯವಸಾಯದ ವಿನಾಶಕ್ಕೆ ಕಾರಣಗಳೇನೆಂಬುದು ಸರ್ಕಾರದವರಿಗೆ ತಿಳಿದಿದೆಯೇ?

ಇ) ಹಾಗಿದ್ದಲ್ಲಿ, ಜೇನು ವ್ಯವಸಾಯದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎ.ಮೊಹಿದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಬಂದಿದೆ.

ಆ) ತಿಳಿದಿದೆ.

ಇ) ಜೇನುಕೃಷಿಯನ್ನು ಪುನರ್ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದ ವಾರ್ಷಿಕ ಜೇನು ಕೃಷಿ ಯೋಜನೆ ಮತ್ತು ಆಹಾರ ಮತ್ತು ಕೃಷಿ ಸಂಸ್ಥೆ ಆಧಾರಿತ ಜೇನುಕೃಷಿ ಅಭಿವೃದ್ಧಿ ಯೋಜನೆಯನ್ನು ಹಾಗೂ ಬ್ರೂಡ್ ವೈರಸ್ ರೋಗ ತಡೆಗಟ್ಟಲು ಸಂಶೋಧನಾ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ಆಶ್ರಯ ಯೋಜನೆ

1137 (1595)